Rega No BG 155

Sri "SATYAVADI"
— DAILY —
MYSORE 4
46 th Year

Protect the cow

— ಶ್ರೀ —

ಸತ್ಯವಾದಿ
SATYAVADI

ಸ್ಥಾಪಕರು– ಅರಮನೆ ಸಿಂಸ್ಕೇದಾರ್ ಎಂ. ಎ. ಸುಬ್ಬರಾಯುರು [ಬಿಡಿ ಪ್ರತಿ 3 ಪೆ

24—1—1962

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
" ಸತ್ಯವಾದಿ " ಪತ್ರಿಕೆಯನ್ನು
ತಪ್ಪದೇ ಓದಿ
ದಿನಪತ್ರಿಕೆ ತಿಂಗಳಿಗೆ 6 ಆಣೆ

ಗೋಸಂರಕ್ಷಣೆ ಮಾಡಿ

ಥಾಂಟರ ಮಾತುಕತೆ

ಪಶ್ಚಿಮ ಇರಿಯ್ ಬಗ್ಗೆ ಶಾಂತಿಯುತ ಪರಿಹಾರಂಕ್ಕಾಗಿ ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಯು ಥಾಂಟರವರು ಹಾಲೆಂಡು ವಕ್ತು ಇಂಡೋನೇಷಿಯಾ ಪ್ರತಿನಿಧಿಗಳೊಡನೆ ಮಾತುಕತೆ ನಡೆಸಿದರು.

ಸರ್ಕಾರ್ನೋ ಸ್ಪಷ್ಟತೆ

ಇಂಡೋನೇಷ್ಯ ಅಧ್ಯಕ್ಷ ಡಾ|| ಸುಕಾರ್ನೋ ಹೇಳಿಕೆಯಿತ್ತು. ಪಶ್ಚಿಮ ಇರಿಯ್ ಸ್ವಾತಂತ್ರ್ಯ ಅಧಾಂದ ಮೇಲೆ ಮಾತುಕತೆ ನಡೆಯಬೇಕೆಂದು ನುಡಿದಿರುವರು.

ರೈಲ್ವೆ ಆರಂಭ

ಮದ್ರಾಸಿನ ಮುಖ್ಯ ಮಂತ್ರಿ ಶ್ರೀ ಕಾಮರಾಜ ನಾಡಾರರು ಸೇಲಂ ರೈಲ್ವೆ ನಿಲ್ದಾಣದಲ್ಲಿ ಸೇಲಂ–ಬೆಂಗಳೂರು ರೈಲ್ವೆಯನ್ನು ಆರಂಭಿಸಿದರು.

ಶತಾಯುವಿನ ಮರಣ

ಭದ್ರಾವತಿಗೆ 3 ಮೈಲಿಗಳ ದೂರದ ಹಿರಿಯೂರು ಗ್ರಾಮದಲ್ಲಿ 120 ವಯಸ್ಸಿನ ಬೈರಜ್ಜನೆಂಬಾತನು ಮಂಗಳವನ್ನು ಹೊಂದಿದನು ಅತನಿಗೆ ಅನೇಕ ಮಕ್ಕಳು ನೂಂಕ್ಕೆ ಹೆಚ್ಚು ಮೊವ್ಮಕ್ಕಳು ಇರುವರು

ಹತ್ಯಾತ್ಮನೆ ಮರಣ

ಮೊ|| ರಾಬರ್ಟ್ಸನ್ ಪೇಟೆಯಲ್ಲಿ ನಡೆದ ಘಟನೆ. ಟಗ್ ಆಫ್ ವಾರ್ ಮ್ಯಾಚಿಗೆ ಅಭ್ಯಾಸ ಮಾಡುತ್ತಿದ್ದ 36 ವರ್ಷದ ಸುಬ್ರಹ್ಮಣ್ಯ ಎಂಬವರು ತಲೆ ಸುತ್ತುವುದಾಗಿ ನುಡಿದು ಅನಂತರ ಪ್ರಜ್ಞಾಹೀನರಾದರು. ಗಣಿ ಆಸ್ಪತ್ರೆಗೆ ಸಾಗಿಸುತ್ತಿದ್ದಾಗ ಅವರು ಮರಣಹೊಂದಿದರು.

oo

ಮೈಸೂರು ಆಯುರ್ವೇದ ಕಾಲೇಜಿನ ವಿದ್ಯಾರ್ಥಿಗಳ ಮುಷ್ಕರ ಸಡೆಯುತ್ತಿದೆ.

ಹುಲಿ ಶಿಕಾರಿಗೆ ಅವಕಾಶ

ಚಿಕ್ಕಮಗಳೂರು ಜಿಲ್ಲೆಯ ಕಡೂರು ತಾಲ್ಲೂಕಿನ ರಂಗನಹಳ್ಳಿಯ 5 ಮೈಲಿಗಳ ಫರ್ಲಾಂಗಿನಲ್ಲಿ ಹುಲಿ ಶಿಕಾರಿಗೆ ಅವಕಾಶವಿದೆ ಹುಲಿ ಕಾಟ ಹೆಚ್ಚಿರುವುದೇ ಕಾರಣ

ಮುದುಕಿ ಬೆಂದಳು

ಶಿವಮೊಗ್ಗಾದಿಂದ ಬಂದಿರುವ ವರದಿಯಂತೆ ಮಾದರಸನಳ್ಳಿಯ ಬೆಂಕಿ ಅನಾಹುತದಲ್ಲಿ ಓರ್ವ ಮುದುಕಿ ಸಟ್ಟು-ಸಶ್ಯಗಳು ನಷ್ಟವಾದ ಅಂದಾಜು ರೂ. 17 ಸಾವಿರ.

ಹೃದಯಚಲನೆ ಯಂತ್ರ

ನಿಂತ ಹೃದಯವನ್ನು ಮತ್ತೆ ಚಲಿಸುವ ಯಂತ್ರವನ್ನು ಬ್ರಿಟನ್ನಿನ ವೈದ್ಯರೋರ್ವರು ತಯಾರಿಸಿರುವರೆಂದು ಲಂಡನ್ನಿನ ಸ್ಟೇಫನ್ಸ್ ಆಸ್ಪತ್ರೆ ಪ್ರಕಟಿಸಿದೆ

ಏಕೀಕರಣ ಆಗಲಿ

ಭಾರತ-ಪಾಕಿಸ್ತಾನ ಏಕೀಕರಣ ಆಗಬೇಕೆಂದು ಆಗ 55 ಕೋಟಿ ಜನರ ಚಿಂತನವನ್ನು ಎದುರಿಸಬಹುದೆಂದು ಕಾಸ್ಮರದಲ್ಲಿ ಸೋಷಲಿಸ್ಟ ನಾಯಕ ಡಾ||ರಾಮಮನೋಹರ ಲೋಹಿಯಾ ಕಾನ್ಪುರದಲ್ಲಿ ತಿಳಿಸಿದರು.

144 ನೆಯ ವಿಧಿ

ವಿದ್ಯಾರ್ಥಿಗಳ ಮುಷ್ಕರದ ಕಾರಣ ಚಂದ್ರಗಿರಿಯಲ್ಲಿ 144 ನೇ ವಿಧಿ ಜಾರಿ ಆಗಿದೆ ಎಂದು ತಿರುಪತಿ ವಾರ್ತೆ.

ನಾಳೆಯ ಪಂಚಾಂಗ

ಅಸ್ಥಾನ ಮಹಾವಿದ್ವಾನ್ ದರ್ಮಾಧಿಕಾರಿ
ದೈವಜ್ಞಶಿಖಾಮಣಿ
ಸಂಪತ್ಕೃಷ್ಣ ಜೋಯಿಸರಿಂದ
25 ಪಂಚಮಿ ಉತ್ತರ

× ಪೂಂಚಿನಲ್ಲಿ 5 ಮಂದಿ ವಿನಾಶ ಕಾರರು ಅಧಿಕಾರಿಗಳಿಗೆ ಶರಣಾಗತರಾದರು.

ಅಂಗೋಲಾ ವಿಮೋಚನೆ ಆಗಲಿ

ಅಂಗೋಲಾಕ್ಕೆ ಸ್ವತಂತ್ರ ದೊರೆಯುವಂತೆ ಬೇಕೆಂಬ ಆಫ್ರಿಕಾ ರಾಷ್ಟ್ರಗಳ ನಿರ್ಣಯವು ವಿಶ್ವಸಂಸ್ಥೆಯ ಪರಿಶೀಲನೆಗೆ ಬಂದು, ಏಷ್ಯದ ಪ್ರತಿನಿಧಿ ಜೋರ್ಡನ್ ಮಾತನಾಡಿ, ಪೋರ್ಚುಗಲ್‌ಗೆ ಬ್ರಿಟನ್ ಅಮೆರಿಕ ಮತ್ತು ಪಶ್ಚಿಮ ಜರ್ಮನಿ ಆಯುಧಗಳನ್ನು ಸರಬರಾಜು ಮಾಡುತ್ತಿದೆ ಎಂದರು ಪೋರ್ಚುಗೀಸರು ವಸಾಹತುಪ್ರಭುತ್ವ ಹೋಗಬೇಕೆಂದು ತಿಳಿಸಿದರು.

ಪ್ರತಿರೂಪ ದಹನ

ಶ್ರೀ ವೆಂಕಟೇಶ್ವರ ವಿಶ್ವವಿದ್ಯಾನಿಲಯದ ಉಪಸ್ಥಾನಪತಿಗಳ ಪ್ರತಿರೂಪವನ್ನು ನೆಲ್ಲೂರು ವಿದ್ಯಾರ್ಥಿಗಳು ಮೊನ್ನೆ ದಹನ ಮಾಡಿದರು.

ಕಾಂಗ್ರೆಸಿಗೆ ದೊಡ್ಡ ಸ್ಪರ್ಧೆ

ಬಿಹಾರಿನಲ್ಲಿ ಕಾಂಗ್ರೆಸಿಗೆ ಭಾರಿ ಪ್ರತಿಸ್ಪರ್ಧೆ ಕೊಡುವ ಪಕ್ಷ ಸ್ವತಂತ್ರ ಪಕ್ಷವಾಗಿದೆ ಎಂದು ಪಾಟ್ನಾದಿಂದ ವರದಿ ಬಂದಿದೆ.

ಫೆಬ್ರವರಿ ತಾ|| 7 ಕ್ಕೆ

ಬೆಂಗಳೂರು ಅ|| ಫ|| ಮ್ಯಾಜಿಸ್ಟ್ರೇಟು ನ್ಯಾಯಾಲಯದಲ್ಲಿ ಸಾಧು ಸೇವಾ ಮೋಕದ್ದಮೆ ಬಂದು ಫೆಬ್ರವರಿ 7 ನೆಯ ತಾ|| ಗೆ ಮುಂದುವರಿಯಿತು ಸಾಧ್ವಿ ವಿನ ಮೇಲೆ ಕನ್ಯಾಪಹಾರ ಆರೋಪವಿದೆ

ಗಗನದಲ್ಲಿ ಹಾರುವ ಬೈಸಿಕಲ್

ಬೈಸಿಕಲ್ಲಿನಂತೆ ಪೆಡಲು ಮಾಡಿಕೊಂಡೇ ಗಗನದಲ್ಲಿ ಹಾರಾಡಬಲ್ಲ ಬೈಸಿಕಲ್ಲನ್ನು ಹ್ಯಾಮಷೈರಿನಲ್ಲಿ ತಯಾರಿಸಲಾಗಿದೆ ; ಈ ವಿಷನ್ನನ್ನು ಅಂತರಿಕ್ಷಕ್ಕೆ ಪ್ರಖ್ಯಾತ ಒಲಂಪಿಕ್ ಆಟಗಾರ ಮಾರ್ಕ್ ಅವಾನನ್ನು ತೆಗೆದುಕೊಂಡು ಹೋಗುವ ನಿರೀಕ್ಷೆ ಇದೆ.

ಮೂವರ ಮರಣ

ಮದ್ರಾಸಿನಿಂದ ಬಂದಿರುವ ವರದಿಯಂತೆ ತಿರುನೆಲ್ವೇಲಿಶಾಲೆಯಲ್ಲಿ ಮೊನ್ನೆ ಮೂವರು ವಿದ್ಯಾರ್ಥಿಗಳು ಮರಣಹೊಂದಿದರು.

ಅಂಚೇಮೂಲಕ ಮತದಾನ.

ಒಬ್ಬ ಸೈನಿಕ, ಮಂತ್ರಿ ಅಥವಾ ಅವರ ಪತ್ನಿಯರು, ಒಬ್ಬ ರಾಜಕೀಯು ಬಂದಿ ಹುತ್ತು, ಜುನಾವಣಾ ಕೆಲಸದ ವೇಲಿರುವ ಒಬ್ಬ ವ್ಯಕ್ತಿ, ಇವರೆಲ್ಲರೂ ಅಂಚೆ ಮೂಲಕ ಮತದಾನ ಮಾಡಲು ಅರ್ಹರಾಗಿರುವರು — ಜುನಾವಣಾ ಭಾಷೆಯಲ್ಲಿ ಈ ವಿಧಾನವನ್ನು ' ಅಂಚೆ ಮೂಲಕ ಮತದಾನ ' ವೆಂದು ಹೇಳುವರು ; ಸ್ವತಃ ಜುನಾವಣಾ ಅಂದ್ರಕ್ಕೆ ಹೋಗಿ ಮತನೀಡಲು ಸಾಧ್ಯವಾಗದಂತಹ ಉದ್ಯೋಗದಲ್ಲಿರುವ ಮತದಾರರಿಗೆ ನೆರವಾಗುವಂತೆ ಈ ವಿಧಾನವನ್ನು ಅಜರಣೆಗೆ ತರಲಾಗಿದೆ

ವಿಚಿತ್ರ ಗೋರಿ

ಬಿಟಿಷ್ನಿನ ಎಸೆಕ್ಸಿನ ಇಲ್ಫರ್ಡ್‌ನಲ್ಲಿನ ಅಸಾಮಾನ್ಯ ಸ್ಮಶಾನದಲ್ಲಿ ಒಂದು ವಿಚಿತ್ರ ಗೋರಿ ; ಅದು ಒಂದು ಇಲಿಯದು — ಇದೇ ರೀತಿ ಸಾಕಿದ ಪ್ರೀತಿವಾತ್ಸ ಪ್ರಾಣಿಗಳ 1600 ಗೋರಿಗಳಿವೆ.

ತೆಲುಗು ಪಂಡಿತರಿಲ್ಲ

ಬೆಂಗಳೂರು ಸರಕಾರಿ ಕೋಟೆ ಹೈಸ್ಕೂಲಿನಲ್ಲಿದ್ದ ತೆಲಗು ಪಂಡಿತರು ಮೂರು ತಿಂಗಳ ಹಿಂದೆ ರಾಜೀನಾಮೆ ಕೊಟ್ಟರೆಂದೂ ಆಗಿನಿಂದ ಅಲ್ಲಿ ತೆಲುಗು ಪಂಡಿತರಿಲ್ಲವೆಂದೂ ಹೇಳಲಾಗಿದೆ.

ರಾಷ್ಟ್ರಗೀತೆ ಹಾಡಿಕೆ

ನವದೆಹಲಿ 23— ರಾಷ್ಟ್ರಗೀತೆಯನ್ನು ಹಾಡುವುದು ಹೇಗೆ ಎಂಬುದರ ಬಗ್ಗೆ ತಿಳುವಳಿಕೆ ಕೊಡುವ ದೃಷ್ಟಿಯಿಂದ ಒಟ್ಟು 12 ಜನರಿಂದ ಬೇರೆಬೇರೆಯಾಗಿ ಹಾಡಿಸಿ ಧ್ವನಿ ಮುದ್ರಿಕೆಗಳನ್ನು ಆಕಾಶವಾಣಿ ತೆಗೆದುಕೊಂಡಿದೆ ; ಹೀಗೆ ಹಾಡಿರುವವರ ತಂಡದಲ್ಲಿ ಪಂಕಜ ಮಲ್ಲಿಕ್, ಸಂಧ್ಯಾ ಮುಖರ್ಜಿ ಮತ್ತು ಶ್ಯಾಮಲ ಮಿತ್ರ ಇವರುಗಳೂ ಇದ್ದಾರೆ.

ವಾರ್ತಾ ವಿಶೇಷಗಳು

ಗ್ವಾಲಿಯರ್ ವಿಧಾನಸಭೆ ಚುನಾವಣೆ ಕ್ಷೇತ್ರಕ್ಕೆ 14 ಮಂದಿ ಅರ್ಜಿ ಸಲ್ಲಿಸಿರುವರು. ಗ್ವಾಲಿಯರ್ ಮಹಾರಾಣಿಯವರು ಕಾಂಗ್ರೆಸಿನ ಪರ ಪ್ರಚಾರ ಮಾಡಿದ್ದು, ಮಹಾರಾಣಿಯವರ ವಿರುದ್ಧವಾಗಿ ಸ್ಪರ್ಧಿಸಿರುವ ಪಕ್ಷ 32 ವರ್ಷಗಳ ಸಂಸ್ಥೆಯಾಗಿದ್ದು ಎಂಬ ಭಂಗಿ ವಹಿಳೆಯನ್ನು ನಿಲ್ಲಿಸಿದೆ

ಜಮ್ಮು ಮತ್ತು ಕಾಶ್ಮೀರ ಅಕಾಲಿದಳದ ಅಧ್ಯಕ್ಷರಾದ ಸರ್ದಾರ್ ಜಗತ್ ಸಿಂಗ್‌ರು ಜಮ್ಮುವಿನಲ್ಲಿ ವೊನ್ನೆ ಹೇಳಿಕೆಯೊಂದನ್ನು, ರಾಜ್ಯದಲ್ಲಿ ನ್ಯಾಯವಾಗಿ ಹಾಗೂ ನಿಷ್ಪಕ್ಷಪಾತವಾಗಿ ಚುನಾವಣೆ ನಡೆಯುವುದೆಂದು ನುಡಿದರು ಅಧಿಕಾರಿಗಳ ಒತ್ತಾಯ ಇರುವುದರಿಂದ ನ್ಯಾಯ ಹಾಗೂ ನಿಷ್ಪಕ್ಷಪಾತ ಚುನಾವಣೆ ನಡೆಯುವುದೆಂದು ನಿರೀಕ್ಷಿಸುವುದು ಸಾಧ್ಯವಿಲ್ಲವೆಂದು ಅವರು ನುಡಿದರು

ಜಮ್ಮು ಮತ್ತು ಕಾಶ್ಮೀರದ ಮುಖ್ಯ ಮಂತ್ರಿ ಭಕ್ಷಿ ಗುಲಾಂ ಮಹಮದ ರವರು ಬೊಂಬಾಯಿನಲ್ಲಿ ಕಾಂಗ್ರೆಸಿನ ಚುನಾವಣಾ ಭಾಷಣವನ್ನು ಆರಂಭಿಸಿ, ರಕ್ಷಣಾ ಮಂತ್ರಿ ಶ್ರೀ ವಿ ಕೆ. ಮೆನನ್‌ರಿಗೆ ಓಟು ಕೊಡುವ ತಪ್ಪನ್ನು ಬೆಂಬಲಿಸುವುದು ನೆಹರುರವರ ಕೈ ಬಲಪಡಿಸಿದಂತೆ ಮತ್ತು ಇನ್ನೇನಾದರೂ ಮಾಡಿದರೆ ಶತ್ರುಗಳನ್ನು ಬಲಪಡಿಸಿದಂತೆ ಎಂದು ನುಡಿದರು

ಶಿವಮೊಗ್ಗಾದಿಂದ ಭದ್ರಾವತಿಯ ಮಧ್ಯೆ ಸಂಚರಿಸುವ ಬಸ್ಸಿನಿಂದ ಲಿಂಗನಮಕ್ಕಿ ಅಣೆಕಟ್ಟಿನಲ್ಲಿ 30 ಮಂದಿ ಗಾಯಗೊಂಡರು. ಅವರಲ್ಲಿ ಅಸಿಸ್ಟೆಂಟು ಇಂಜಿನಿಯರು ಶ್ರೀ ವಿಶ್ವನಾಥಗೌಡರು ಇರುವರು.

ಬೆಂಗಳೂರು ಉತ್ತರ ತಾಲ್ಲೂಕಿನ ಅಳ್ಳಾಳಸಂದ್ರದ ಶ್ರೀ ಶಾಂತಾಶ್ರಮದ ವಿನಾಯಕಸ್ವಾಮಿ ದೇವಾಲಯದಲ್ಲಿ ಈ ತಿಂಗಳ 25 ರಿಂದ ಫೆಬ್ರವರಿ 3 ರವರೆಗೆ ಅಷ್ಟಗ್ರಹಕೂಟ ಶಾಂತಿಹೋಮ ನಡೆಯುವುದು

ಬೀಜಗಳ ರಾಜ - ಗೇರುಬೀಜ

ಬರ್ನ್ (ಜರ್ಮನಿ)— ಒಬ್ಬ ಮನುಷ್ಯ ತನ್ನ ಆರೋಗ್ಯಕ್ಕೆ ಯಾವ ಬಾಧೆಯೂ ಇಲ್ಲದಂತೆ ದಿನಕ್ಕೆ 220 ಗೇರುಬೀಜಗಳನ್ನು ತಿಂದು ಬದುಕಬಲ್ಲನೆಂಬ ವಿಚಾರ ಜರ್ಮನಿಯಲ್ಲಿ ಬಹಳ ಜನಕ್ಕೆ ತಿಳಿದೇ ಇಲ್ಲ : ಇದು ಕೊಬ್ಬು, ಕಾರ್ಬೊಹೈಡ್ರೇಟ್ಸ್, ಪ್ರೊಟೀನ್, ವಿಟಮಿನ್ ಮತ್ತು ಖನಿಜದ್ರವ್ಯಗಳನ್ನು ಹೊಂದಿರುವ ಸತ್ವಪೂರ್ಣ ಆಹಾರವೆಂದು ಜರ್ಮನರಿಗೆ ತಿಳಿದಿರಲಿಲ್ಲ ; ಈ ಗೇರು ಬೀಜವು ದಕ್ಷಿಣ ಭಾರತದ ತೇವವಿಲ್ಲದ ಮಣ್ಣಿನಲ್ಲಿ ಬೆಳೆಯುವ 90 ಅಡಿಗಳ ಎತ್ತರದ ಮರಗಳ ಮೇಲೆ ಬಿಡುವ ಹಣ್ಣಿನೊಂದಿಗೆ ಬೆಳೆಯುವುದೆಂಬುದು ಕೆಲವೇ ಮಂದಿ ವಿದ್ಯಾವಂತರಿಗೆ ಗೊತ್ತು : ಶ್ರೀ ಕಾರಣ ಮೇವಾಡ್ ಎಂಬ ಭಾರತೀಯ ಯುವಕ ಒಬ್ಬರು ಜರ್ಮನ್ ಜನತೆಗೆ ಇದರ ಉಪಯುಕ್ತತೆಯ ವಿಚಾರವನ್ನು ತಿಳಿಸುವ ಉತ್ಸಾಹದಲ್ಲಿ ತೊಡಗಿದ್ದಾರೆ : ಸುಮಾರು 9 ವರ್ಷಗಳಿಂದ ಗೇರುಬೀಜದ ಮಾರಾಟವನ್ನು ಈ ದೇಶದಲ್ಲಿ ಹೆಚ್ಚಿಸುವ ಪ್ರಯತ್ನದಲ್ಲಿ ಜಯಶೀಲರಾಗಿದ್ದಾರೆ.

SHAKTI SUDHA

A Superb Tonic

ವುಡ್‌ಲ್ಯಾಂಡ್ಸ್ ಮಹೋನ್ನತ 7ನೇ ವಾರ

ಜಬ್ ಪ್ಯಾರ್ ಕಿಸೀಸೆ ಹೋತಾಹೈ

ದೇವ್‌ಆನಂದ್, ಆಶಾ ಪಂಕಾಖ್ ಮತ್ತು ಪ್ರಖ್ಯಾತ ತಾರೆಯರು ಪಾತ್ರವಹಿಸಿರುವ

ಅತ್ಯಂತ ಮನರಂಜನ ಹಿಂದಿ ಚಿತ್ರ [ದಿನವಹಿ 3 ಪ್ರದರ್ಶನಗಳು

ಆಪೆರಾ ಕೀರ್ತಿಯುತ 4 ನೇ ವಾರ

ನಾಗಾರ್ಜುನ (ಕನ್ನಡ)

ತಾರಾಗಣ— ರಾಜಕುಮಾರ್, ನಾಗಯ್ಯ, ವಜ್ರಮುನಿ, ಹರಿಣಿ, ನರಸಿಂಹರಾಜು ಶಾಂತಾ ರಾವ್, ರಾಜನಾಲ [ದಿನವಹಿ 3 ಆಟಗಳು]

Help ' The Gorakshana '

ಗೋರಕ್ಷಣ ಪ್ರಾಣಿದಯಾ ಕಾರ್ಯಗಳು ಹೆಚ್ಚಿಚ್ಚಾಗಿ ನಡೆಯಲಿ

" ಗೋರಕ್ಷಣ " ಪತ್ರಿಕೆಗೆ ಚೆಂಬಲಿಗರಾಗಿರಿ

.... ಅವೀರಕಾಳ್ಳ ಭೇಟಿ ಸಂಬಂಧದ ಚಿತ್ರಗಳು ....

Edited, Printed & Published by the Proprietor, Dharma Prachara Nirata M. S. Krishna Rao, at the Satyavadi Press Chamarajapuram, Mysore 4.